# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 47 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11.08.2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಕಂಡುಬಂದಿರುವ ಹಾವು ಕಡಿತ ಪ್ರಕರಣಗಳು ಎಷ್ಟು; ಈ ಪೈಕಿ ಸಾವನ್ನಪ್ಪಿರುವವರ ಸಂಖ್ಯೆ ಎಷ್ಟು; (ವರ್ಷವಾರು ಮತ್ತು ಜಿಲ್ಲಾವಾರು ವಿವರ ನೀಡುವುದು)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ವರದಿಯಾದ ಹಾವು ಕಡಿತ ಪ್ರಕರಣಗಳು ಮತ್ತು ಹಾವು ಕಡಿತದಿಂದ ಮರಣ ಪ್ರಕರಣಗಳ ವಿವರಗಳನ್ನು ಈ ಕೆಳಕಂಡಂತೆ ನೀಡಿದೆ.
<table>
<tr><th>ವರ್ಷ</th><th>ಹಾವು ಕಡಿತ ಪ್ರಕರಣಗಳು</th><th>ಮರಣದ ಪ್ರಕರಣಗಳು</th></tr>
<tr><td>2022</td><td>3,439</td><td>17</td></tr>
<tr><td>2023</td><td>6,596</td><td>19</td></tr>
<tr><td>2024</td><td>13,235</td><td>100</td></tr>
<tr><td>ಒಟ್ಟು</td><td>23,270</td><td>136</td></tr>
</table>
ವರ್ಷವಾರು ಮತ್ತು ಜಿಲ್ಲಾವಾರು ವಿವರವಾದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ</td><td>ಹಾವು ಕಡಿತಕ್ಕೆ ಸಕಾಲಿಕ ಚಿಕಿತ್ಸೆ ದೊರೆಯದಿರುವುದರಿಂದ ಮತ್ತು ಹಾವು ಕಡಿತಕ್ಕೆ ನೀಡುವ ಔಷಧಗಳ ಕೊರತೆಯಿಂದ ಸಾವನ್ನಪ್ಪುವವರ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಸಕಾಲಿಕ ಚಿಕಿತ್ಸೆ ಮತ್ತು ಅಗತ್ಯ ಔಷಧಗಳನ್ನು ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)</td><td>ಬಂದಿದೆ.<br><br>ಆದರೆ ಹಾವು ಕಡಿತ ಪ್ರಕರಣಗಳಲ್ಲಿ ಯಾವ ರೋಗಿಯೂ ಸಕಾಲಿಕ ಚಿಕಿತ್ಸೆ ದೊರೆಯದೆ ಹಾಗೂ ಔಷಧಿ ಸಿಗದೆ ಮೃತಪಟ್ಟಿರುವುದು ವರದಿ ಆಗಿರುವುದಿಲ್ಲ.<br><br>ಸರ್ಕಾರಿ ಆಸ್ಪತ್ರೆಗಳಲ್ಲಿ ಸಕಾಲಿಕ ಚಿಕಿತ್ಸೆ ಮತ್ತು ಅಗತ್ಯ ಔಷಧಿಗಳನ್ನು ಪೂರೈಸಲು ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br><br>1. ರಾಜ್ಯದಲ್ಲಿ ಹಾವು ಕಡಿತವನ್ನು ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ದಿನಾಂಕ 12.02.2024 ರಂದು ಘೋಷಿತ ಕಾಯಿಲೆ ಎಂದು ಅಧಿಸೂಚನೆ ಹೊರಡಿಸಲಾಯಿತು. ಇದರಿಂದ ನೈಜ ಪ್ರಕರಣಗಳಲ್ಲಿ ಏರಿಕೆಯಾಗದಿದ್ದರೂ ಕೂಡ ವರದಿಯಾಗುತ್ತಿರುವ ಸಂಖ್ಯೆ ಹೆಚ್ಚಾಗಿರುತ್ತದೆ.<br>2. ರಾಜ್ಯದ ಎಲ್ಲಾ ಸರ್ಕಾರಿ ವೈದ್ಯಾಧಿಕಾರಿಗಳಿಗೆ ಹಾಗೂ ಇತರೇ ಆರೋಗ್ಯ ಸಿಬ್ಬಂದಿಗಳಿಗೆ ಹಾವು ಕಡಿತದ ಚಿಕಿತ್ಸೆ ಬಗ್ಗೆ ವಿಶೇಷ ತರಬೇತಿಯನ್ನು ನೀಡಲಾಗಿರುತ್ತದೆ. ಹಾವು ಕಡಿತಕ್ಕೆ ನೀಡಲಾಗುವ Anti Snake Venom (ASV) ಅನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ (ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆ)</td></tr>
</table>

| | | |
|---|---|---|
| | | ಉಚಿತವಾಗಿ ನೀಡಲಾಗುತ್ತಿದೆ ಹಾಗೂ ಎಲ್ಲಾ ಆಸ್ಪತ್ರೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ASV ಯನ್ನು ಇಟ್ಟುಕೊಳ್ಳಲು ಸೂಚಿಸಿ ರಾಜ್ಯದಿಂದ KSMSCL (Karnataka State Medical Supplies Corporation Ltd) ಮುಖಾಂತರ ASV ಯನ್ನು ವಿತರಿಸಲಾಗಿದೆ.<br>3. ದಿನಾಂಕ 10.07.2024 ರಂದು ಅಂತರ್ ಇಲಾಖಾ ಕಾರ್ಯಾಗಾರವನ್ನು ನಡೆಸಿ, ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣದಲ್ಲಿ ತಮ್ಮ ತಮ್ಮ ಇಲಾಖೆಗಳ ಜವಾಬ್ದಾರಿಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ವಿವರಿಸಲಾಯಿತು.<br>4. ಹಾವು ಕಡಿತದಿಂದ ಉಂಟಾದ ಎಲ್ಲಾ ಮರಣಗಳನ್ನು ಕಡ್ಡಾಯವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ Death Audit ಮಾಡಿ ವರದಿ ನೀಡಲು ಸೂಚಿಸಲಾಗಿದೆ.<br>5. ರಾಜ್ಯದಿಂದ ನೀಡಿರುವ IEC Posters ಹಾಗೂ ವಿಡಿಯೋಗಳನ್ನು ಉಪಯೋಗಿಸಿ IEC ಚಟುವಟಿಕೆಗಳನ್ನು ನಡೆಸಿ, ಸಮುದಾಯದಲ್ಲಿ ಹಾವು ಕಡಿತದ ಬಗ್ಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಲು ಜಿಲ್ಲೆಗಳಿಗೆ ಸೂಚಿಸಲಾಗಿದೆ. ಸ್ಥಳೀಯ ಮಟ್ಟದಲ್ಲಿ ಗ್ರಾಮ ಪಂಚಾಯಿತಿ, NGOಗಳು, ಸಾಂಪ್ರದಾಯಕ ನಾಟಿ ಚಿಕಿತ್ಸಕರು ಹಾಗೂ ಇತರೆ ಸ್ಥಳೀಯ ಮುಖಂಡರು ಒಳಗೊಂಡಂತೆ ಇತರೆ ಇಲಾಖೆಗಳ (ಅರಣ್ಯ ಇಲಾಖೆ, ಕೃಷಿ ಇಲಾಖೆ, ಪಶು ಸಂಗೋಪನಾ ಹಾಗೂ ಮೀನುಗಾರಿಕೆ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, etc.,) ಸಹಯೋಗದೊಂದಿಗೆ IEC ಚಟುವಟಿಕೆಗಳನ್ನು ನಡೆಸಲು ಹಾಗೂ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರಿಗೆ ಸಮುದಾಯದಲ್ಲಿ ಹಾವು ಕಡಿತದ ಬಗ್ಗೆ ಅರಿವು ಮೂಡಿಸಲು ತಿಳಿಸಲಾಗಿದೆ. |

**ಆಕುಕ 88 ಎಸ್‌ಎಂಎಂ 2025**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಸಚಿವರು**

ಅನುಬಂಧ-1

| District wise Snakebite data from the year 2022 to 2024 | | | | | | |
|---|---|---|---|---|---|---|
| District | 2022 | | 2023 | | 2024 | |
| | Cases | Deaths | Cases | Deaths | Cases | Deaths |
| BBMP | 47 | 0 | 155 | 0 | 293 | 0 |
| Bagalkot | 23 | 0 | 99 | 0 | 371 | 6 |
| Ballari | 4 | 0 | 153 | 4 | 568 | 4 |
| Belagavi | 113 | 1 | 116 | 0 | 214 | 3 |
| Bengaluru Rural | 86 | 0 | 58 | 0 | 183 | 1 |
| Bengaluru Urban | 90 | 0 | 104 | 0 | 158 | 1 |
| Bidar | 16 | 0 | 27 | 0 | 126 | 3 |
| Chamarajanagar | 35 | 0 | 56 | 0 | 261 | 1 |
| Chikkaballapura | 194 | 0 | 812 | 0 | 813 | 1 |
| Chikkamagaluru | 145 | 0 | 291 | 0 | 362 | 3 |
| Chitradurga | 375 | 0 | 347 | 0 | 406 | 4 |
| Dakshina Kannada | 54 | 0 | 247 | 0 | 625 | 4 |
| Davangere | 114 | 0 | 175 | 1 | 759 | 0 |
| Dharwad | 315 | 0 | 299 | 0 | 397 | 2 |
| Gadag | 8 | 0 | 69 | 0 | 159 | 1 |
| Hassan | 171 | 0 | 505 | 0 | 850 | 2 |
| Haveri | 89 | 0 | 389 | 0 | 391 | 3 |
| Kalaburagi | 58 | 1 | 61 | 0 | 75 | 8 |
| Kodagu | 134 | 1 | 163 | 0 | 331 | 1 |
| Kolar | 62 | 0 | 109 | 0 | 382 | 3 |
| Koppal | 97 | 0 | 277 | 0 | 555 | 8 |
| Mandya | 156 | 0 | 302 | 4 | 763 | 5 |
| Mysuru | 189 | 0 | 323 | 0 | 790 | 4 |
| Raichur | 4 | 0 | 7 | 0 | 205 | 2 |
| Ramanagara | 15 | 0 | 78 | 2 | 232 | 0 |
| Shivamogga | 117 | 0 | 274 | 0 | 699 | 6 |
| Tumakuru | 29 | 14 | 68 | 5 | 605 | 9 |
| Udupi | 260 | 0 | 274 | 1 | 438 | 1 |
| Uttara Kannada | 333 | 0 | 608 | 0 | 649 | 4 |
| Vijayanagar | 69 | 0 | 71 | 2 | 177 | 5 |
| Vijayapura | 11 | 0 | 30 | 0 | 326 | 2 |
| Yadgir | 26 | 0 | 49 | 0 | 72 | 3 |
| **Total** | **3439** | **17** | **6596** | **19** | **13235** | **100** |

ದಿನಾಂಕ: 01.08.2025

ಯೋಜನಾ ನಿರ್ದೇಶಕರು (ಐಡಿಎಸ್‌ಪಿ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆರೋಗ್ಯ ಸೌಧ, ಬೆಂಗಳೂರು